ಜಲಾಶಯಗಳನ್ನು ಗುರುತಿಸಿ ಯಾವುದೇ ಕ್ರಮಗಳನ್ನು ತೆಗೆದುಕ್ಕೊಳ್ಳದೆ ಅವು ಏಳೆಂಟು ವರ್ಷಗಳಿಂದ ಹಾಗೆ ಬಿದ್ದಿತ್ತು. ಅದರಲ್ಲಿ ನಾವು ಸಂಪೂರ್ಣವಾಗಿ detail survey ಮಾಡಿ ತನಿಖೆಯನ್ನು ಮಾಡಿದ ಮೇಲೆ ಅದರಲ್ಲಿ 9 ರಲ್ಲಿ 4 ಅನ್ನು ಕೂಡಲೇ ತೆಗೆದುಕೊಳ್ಳಬಹುದು, ಇನ್ನು ಉಳಿದ ಐದನ್ನು ಏಕೆ ತೆಗೆದುಕೊಳ್ಳಲಿಕ್ಕಾಗುವುದಿಲ್ಲವೆಂದರೆ ಈಗಾಗಲೇ ನೀರಾವರಿ ಪ್ರದೇಶವೇ ಆಗುತ್ತಿದೆ. 4 balancing reservoir ಮಾಡಲಿಕ್ಕೆ ಈಗಾಗಲೇ ನಾವು ಕ್ರಮವನ್ನು ತೆಗೆದುಕೊಂಡಿದ್ದೇವೆ. ಅದರಲ್ಲಿ ಸುಮಾರು 10 ಟಿ.ಎಂ.ಸಿ. ನೀರನ್ನು ಉಳಿಸಿಕೊಳ್ಳಬಹುದು. ಆ 4 ಬ್ಯಾರೇಜ್ಗಳ ವಿವರವನ್ನು ಕೊಡುತ್ತೇವೆ. ನಿಮ್ಮ ಸಲಹೆಯನ್ನು ಒಪ್ಪಿಕೊಳ್ಳುತ್ತೇವೆ. ಆ Re-allocation ಬಗ್ಗೆ ಚಿಂತನೆಯನ್ನು ಮಾಡುತ್ತೇವೆ.

ಡಾ: ಹೆಚ್.ಸಿ.ಮಹದೇವಪ್ಪ: ಅಧ್ಯಕ್ಷರೇ, ಮಂತ್ರಿಗಳು ಈಗಾಗಲೇ ಸಮರ್ಪಕವಾದ ಉತ್ತರವನ್ನು ಕೊಟ್ಟಿದ್ದಾರೆ. ರಾಜ್ಯದ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು 21 ಟಿ.ಏಂ.ಸಿಯಷ್ಟು ಹೂಳು ತುಂಬಿದೆಯೆಂದರೆ ಇದರ ಬಗ್ಗೆ ಬಹಳ ಗಂಭೀರವಾಗಿ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಿಗೆ ತಿಳಿಸಬಯಸುತ್ತೇನೆ.

ಸಣ್ಣ ನೀರಾವರಿ ಇಲಾಖೆಯ ಕಾಮಗಾರಿಯ ಬಗ್ಗೆ.

37 (06) ಶ್ರೀ ಎ.ಎಸ್.ಪಾಟೀಲ (ನಡಹಳ್ಳೀ)

ಶ್ರೀ ಗೋವಿಂದ ಎಂ. ಕಾರಜೋಳ (ಮಾನ್ಯ ಸಣ್ಣ ನೀರಾವಾರಿ, ಯೋಜನೆ ಹಾಗೂ ಸಾಮಖ್ಯಿಕ ಸಚಿವರು)

ಅ) 2008–09ನೇ ಸಾಲಿನಲ್ಲಿ ಬಿಜಾಪೂರ ಮತ್ತು ಬಾಗಲಕೋಟೆ ಜಿಲ್ಲೆಯಲ್ಲಿ ಹೊಸದಾಗಿ ವಿವಿಧ ಯೋಜನೆಗಳ ಅಡಿಯಲ್ಲಿ ಎಷ್ಟು ಹೊಸ ಕೆರೆಗಳು ಮತ್ತು ಬಾಂದಾರಗಳು ಹಾಗೂ ಇನ್ನಿತರ ಕಾಮಾಗಾರಿಗಳಿಗೆ ಮಂಜೂರಾತಿ ದೊರಕಿದೆ(ಮತಕ್ಷೇತ್ರವಾರು ಅಂಕಿ ಅಂಶ ಅನುದಾನ ಸಹಿತ ಕಾಮಗಾರಿಗಳ ಹೆಸರಿನೊಂದಿಗೆ ವಿವರ ನೀಡುವುದು);

2008–09ನೇ ಸಾಲಿನಲ್ಲಿ ಮಂಜೂರಾತಿ ನೀಡಿ ಕಾಮಗಾರಿಗಳ ವಿವರ ಕೆಳಕಂಡಂತಿದೆ:

ಕ್ರ. ಸಂ	ಕಾಮಗಾರಿಯ ವಿವರ	ಬಿಜಾಪುರ ಜಿಲ್ಲೆ	ಬಾಗಲಕೋಟೆ ಜಿಲ್ಲೆ
1	ಕೆರೆಗಳು	07	07

2	ಬಾಂದರಗಳು	17	13
3	ಏತ ನೀರಾವರಿ ಯೋಜನೆಗಳು	04	07
4	ಪ್ರವಾಹ ನಿಯಂತ್ರಣ ಕಾಮಗಾರಿಗಳು	08	02
5	ಸುಧಾರಣೆ/ ಇನ್ನಿತರ ಕಾಮಗಾರಿಗಳು	21	30

ಮತಕ್ಷೇತ್ರವಾರು ಹಾಗೂ ಅನುದಾನ ಅಂಕಿ ಅಂಶಗಳನ್ನು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) 2008–09ನೇ ಸಾಲಿನಲ್ಲಿ ಬಿಜಾಪೂರ ಜಿಲ್ಲೆಯಲ್ಲಿನ ಮತ್ತು ಬಾಗಲಕೋಟೆ ಜಿಲ್ಲೆಯಲ್ಲಿನ ಎಷ್ಟು ಕೆರೆಗಳಿಗೆ ಹೂಳೆತ್ತುವುದಕ್ಕೆ ಮತ್ತು ಸುಧಾರಣೆಗಾಗಿ ಸರ್ಕಾರದಿಂದ ಮಂಜೂರಾತಿ ದೊರಕಿದೆ; ಮತಕ್ಷೇತ್ರವಾರು ಅಂಕಿ ಅಂಶ ಅನುದಾನ ಸಹಿತ ಕಾಮಗಾರಿ ಹೆಸರಿನೊಂದಿಗೆ ವಿವರ ನೀಡುವುದು;

ಬಿಜಾಪುರ ಜಿಲ್ಲೆಯಲ್ಲಿ 21 ಮತ್ತು ಬಾಗಲಕೋಟೆ ಜಿಲ್ಲೆಯ 30 ಕೆರೆಗಳ ಅಭಿವೃದ್ಧಿ ಕಾರ್ಯ ಕೈಗೊಳ್ಳಲಾಗಿದ್ದು, ಈ ಅಭಿವೃದ್ಧಿ ಕಾರ್ಯದಲ್ಲಿ ಕೆಲವೊಂದು ಕೆರೆಗಳ ಹೂಳೆತ್ತುವ ಅಂಶವೂ ಸೇರಿದೆ. ಅಭಿವೃದ್ಧಿ ಕಾರ್ಯ ಕೈಗೊಂಡ ಮತಕ್ಷೇತ್ರವಾರು ಹಾಗೂ ಅನುದಾನದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿರುವ ಮತಕ್ಷೇತ್ರಗಳಿಗೆ ನೀಡಿರುವ ಅನುದಾನದಲ್ಲಿ ದೇವರ ಹಿಪ್ಪರಗಿ ಮತಕ್ಷೇತ್ರಕ್ಕೆ ಕಡಿಮೆ ಅನುದಾನ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು?

ಸಣ್ಣ ನೀರಾವರಿ ಯೋಜನೆಗಳನ್ನು ಅವುಗಳ ತಾಂತ್ರಿಕ ಶಕ್ಯತೆ ಹಾಗೂ ಅನುದಾನದ ಲಭ್ಯತೆಯನ್ನು ಆಧರಿಸಿ ಕೈಗೊಳ್ಳಲಾಗುತ್ತಿರುವುದರಿಂದ, ಅನುದಾನದ ಹಂಚಿಕೆಯಲ್ಲಿ ಹೆಚ್ಚು ಅಥವಾ ಕಡಿಮೆ ಪ್ರಶ್ನೆ ಉದ್ಭವಿಸವುದಿಲ್ಲ.

ವಿಧಾನ ಸಭಾ ಸದಸ್ಯರಾದ ಶ್ರೀ.ಪಾಟೀಲ್.ಎ.ಎಸ್. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 6 ಕ್ಕೆ ಅನುಬಂಧ.

ಹೊಸ ಕೆರೆಗಳು

ಕ್ರ.ಸಂ.	ಜಿಲ್ಲೆ	ಮತಕ್ಷೇತ್ರ	ಕಾಮಗಾರಿಯ ಹೆಸರು	ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ	2008–09ನೇ ಸಾಲಿನ ಅನುದಾನ ರೂ.ಲಕ್ಷಗಳಲ್ಲಿ
1	2	3	4	5	6

1	ವಿಜಾಪೂರ	ನಾಗಠಾಣ	1.ಅಗಸನಾಳಹತ್ತಿರ ಹೊಸ ಕೆರೆ ನಿರ್ಮಾಣ	46.50	13.95
		ಬಬಲೇಶ್ವರ	2.ಕಾಖಂಡಕಿ ಹತ್ತಿರ ಜಿನುಗು ಕೆರೆ ನಿರ್ಮಾಣ	148.00	44.40
			3.ಟಕ್ಕಳಕಿ ಕೆರೆ ಬಾಕಿ ಕೆಲಸ	20.00	6.00
			4.ಜಾಲಗೇರಿ ಹತ್ತಿರ ಹೊಸ ಕೆರೆ ನಿರ್ಮಾಣ	150.00	45.00
		ದೇವರಹಿಪ್ಪರಗಿ	5.ಕಾರಿಗನೂರ–ಕೊಡಗಾನೂರ ಹತ್ತಿರ ಜಿನುಗು ಕೆರೆ ನಿರ್ಮಾಣ	125.00	37.50
		ಮುದ್ದೇಬಿಹಾಳ	6.ಮಲಗಲದಿನ್ನಿ ಹತ್ತಿರ ಜಿನುಗು ಕೆರೆ ನಿರ್ಮಾಣ	80.00	24.00
		ಬ–ಬಾಗೇವಾಡಿ	7.ಉಕ್ಕಲಿ ಹತ್ತಿರ ಜಿನುಗು ಕೆರೆ	124.00	37.20
2	ಬಾಗಲಕೋಟ	ಬದಾಮಿ	1. ಖ್ಯಾಡ ಹತ್ತಿರ ಜಿನುಗು ಕೆರೆ	27.00	8.10
		ಮುಧೋಳ	2.ನಿಂಗಾಪೂರ ಹತ್ತಿರ ಜಿನುಗು ಕೆರೆ	50.00	15.00
			3.ಚಿತ್ರಬಾನುಕೋಟೆ ಸೈಟ್–2	30.00	9.00
			4.ಚಿತ್ರಬಾನುಕೋಟೆ ಸೈಟ್–1	30.00	9.00
		ಆಮಖಂಡಿ	5.ನಾವಲಗಿ ಹತ್ತಿರ ಜಿನುಗು ಕೆರೆ	49.50	14.85
			6.ಸಾವಳಗಿ ಸೈ–2 ಜಿನುಗು ಕೆರೆ	30.00	9.00
		ತೇರದಾಳ	7.ಚಿಮ್ಮಡ ಹತ್ತಿರ ಜಿನುಗು ಕೆರೆ	50.00	15.00

ವಿಧಾನ ಸಭಾ ಸದಸ್ಯರಾದ ಶ್ರೀ.ಪಾಟೀಲ್.ಎ.ಎಸ್. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 6 ಕ್ಕೆ ಅನುಬಂಧ

ಬಂದಾರ ಕಾಮಗಾರಿಗಳು

ಕ್ರ ಸಂ.	ಜಿಲ್ಲೆ	ಮತಕ್ಷೇತ್ರ	ಕಾಮಗಾರಿಯ ಹೆಸರು	ಅಂದಾಜು ಮೊತ್ತ ರೂ.ಲಕ್ಷಗಳ	2008–09ನೇ ಸಾಲಿನ

				ಲ್ಲಿ	ಅನುದಾನ ರೂ.ಲಕ್ಷಗಳಲ್ಲಿ
1	2	3	4	5	6
1	ವಿಜಾಪೂರ	ಬಬಲೇಶ್ವರ	1.ಹಾವಿನಾಳ ಹತ್ತಿರ ಬಿಸಿಬಿ	226.00	67.80
			2.ಗುಣಕಿ ಹತ್ತಿರ ಬಂದಾರ ನಿರ್ಮಾಣ	50.00	15.00
			3.ಚಾಲಗೇರಿ ಡೋಕಳೆವಾಡಿ ಬಂದಾರ ನಿರ್ಮಾಣ	50.00	15.00
			4.ಇಟ್ಟಂಗಿಹಾಳ–ಕಿಲಾರಹಟ್ಟಿ ಬಂದಾರ ನಿರ್ಮಾಣ	50.00	15.00
		ಸಿಂದಗಿ	5.ಕನ್ನೊಳ್ಳಿ ಹತ್ತಿರ ಬಂದಾರ ನಿರ್ಮಾಣ	50.00	15.00
			6.ತಾಂಬಾ ಬ್ಯಾರೇಜ್ ಸೈಟ್–2	300.00	90.00
		ಇಂಡಿ	7.ಅಥರ್ಗಾ–ಹೂನ್ನಳ್ಳಿ ಹತ್ತಿರ ಬಿಸಿಬಿ	210.00	63.00
			8.ಬೆನಕ ಹಳ್ಳಿ ಸೈಟ್–2 ಹತ್ತಿರ ಬಿಸಿಬಿ	181.00	54.30
		ದೇವರಹಿಪ್ಪರಗಿ	9.ಹಿಟ್ನಿಹಳ್ಳಿ ಹತ್ತಿರ ಬಂದಾರ ನಿರ್ಮಾಣ	45.00	13.50
			10.ಮೈಲೇಶ್ವರ ಹತ್ತಿರ ಬಂದಾರ ನಿರ್ಮಾಣ	115.00	30.00
	〃	ಮುದ್ದೇಬಿಹಾಳ	11.ರಕ್ಕಸಗಿ ಬಂದಾರ	49.65	14.90
			12.ಡೊಂಕಮಡು ಹತ್ತಿರ ಬ್ಯಾರೇಜ್	460.00	138.00
			13.ತಾಳಿಕೋಟಿ ಹತ್ತಿರ ಬ್ಯಾರೇಜ್	64.00	19.20
		ಬ–ಬಾಗೇವಾಡಿ	14.ಮಸೂತಿ ಹತ್ತಿರ ಬಂದಾರ ನಿರ್ಮಾಣ	48.50	14.55
			15.ಕೋಲಾರ ಹತ್ತಿರ ಬಿಸಿಬಿ ನಿರ್ಮಾಣ	400.00	120.00
			16.ಇಂಗಳೇಶ್ವರ ಹತ್ತಿರ ಬಂದಾರ ನಿರ್ಮಾಣ	39.00	11.70
			17.ಬ–ಬಾಗೇವಾಡಿ ಹತ್ತಿರ ಬಂದಾರ ನಿರ್ಮಾಣ	50.00	15.00

2	ಬಾಗಲ ಕೋಟೆ	ಬದಾಮಿ	1.ಕಾತರಕಿ ಹತ್ತಿರ ಬ್ಯಾರೇಜ್	372.00	111.60
			2.ಜಾಲಿಹಾಳ ಬ್ಯಾರೇಜ್ ನಿರ್ಮಾಣ	85.00	25.50
		ಮುಧೋಳ	3.ಅರಳಿಕಟ್ಟೆ ಬಂದಾರ	50.00	15.00
			4. ಜಂಬಗಿ ಬಂದಾರ	266.00	79.80
			5.ಮಾಚಕನೂರ ಹತ್ತಿರ ಬಿಸಿಬಿ	610.00	183.00
			6.ಭಂಟನೂರ–ಹೆಬ್ಬಾಳ ಬಿಸಿಬಿ	225.00	67.50
			7.ಭಂಟನೂರ–ಚಿಕ್ಕೂರ ಬಿಸಿಬಿ	225.00	67.50
		ಹುನಗುಂದ	8.ಇಲಕಲ್ ಹತ್ತಿರ ಬಿಇಬಿ	99.00	29.70
			9. ಕರಡಿ ಹತ್ತಿರ ಬ್ಯಾರೇಜ್	30.00	9.00
			10.ಹಿರೇಮಾಗಿ–ಚಿಕ್ಕಾಗಿ ಹತ್ತಿರ ಬಿಸಿಬಿ	490.00	147.00
			11.ನಂದವಾಡಗಿ ಬ್ಯಾರೇಜ್	50.00	15.00
		ಜಮಖಂಡಿ	12.ಕನ್ನೊಳ್ಳಿ ಹತ್ತಿರ ಬಂದಾರ ನಿರ್ಮಾಣ	50.00	15.00
		ಬೀಳಗಿ	13. ಕಾತರಕಿ–ಕಲಾದಗಿ ಹತ್ತರ ಬಿಸಿಬಿ	1100.00	330.00

ವಿಧಾನ ಸಭಾ ಸದಸ್ಯರಾದ ಶ್ರೀ.ಪಾಟೀಲ್.ಎ.ಎಸ್. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 6 ಕ್ಕೆ ಅನುಬಂಧ

ಏತ ನೀತಾವರಿ ಯೋಜನೆ

ಕ್ರ ಸಂ.	ಜಿಲ್ಲೆ	ಮತಕ್ಷೇತ್ರ	ಕಾಮಗಾರಿಯ ಹೆಸರು	ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ	2008–09ನೇ ಸಾಲಿನ ಅನುದಾನ ರೂ. ಲಕ್ಷಗಳಲ್ಲಿ

1	2	3	4	5	6
1.	ಬಿಜಾಪುರ	ಬಬಲೇಶ್ವರ	1.ಕಾರಜೋಳ ಏ.ನೀ. ಯೋಜನೆ (ಸ.ನಂ.68/2ಬಿ ಮತ್ತು ಇತರೆ)	20.00	6.00
			2.ಕಾರಜೋಳ ಏ.ನೀ. ಯೋಜನೆ (ಸ.ನಂ.97/2 ಮತ್ತು ಇತರೆ)	20.00	6.00
			3.ಕಾರಜೋಳ ಏ.ನೀ. ಯೋಜನೆ (ಸ.ನಂ.94/1 ಮತ್ತು ಇತರೆ)	25.00	7.50
			4.ಕಾರಜೋಳ ಏ.ನೀ. ಯೋಜನೆ (ಸ.ನಂ.2/1 ಮತ್ತು ಇತರೆ)	10.00	3.00
2	ಬಾಗಲಕೋಟ	ಬಾಗಲಕೋಟ	1.ಮುಗಳೊಳ್ಳಿ ಹತ್ತಿರ ಏ.ನೀ.ಯೋ	1500.00	450.00
		ಮುಧೋಳ	2.ಯಡಹಳ್ಳಿ ಏ.ನೀ. ಯೋಜನೆ	45.00	13.50
			3.ಮಾಚಕನೂರ ಏ.ನೀ. ಯೋಜನೆ	30.00	9.00
			4.ಮಳಲಿ ಏ.ನೀ. ಯೋಜನೆ	30.00	9.00
			5.ಇಂಗಳಗಿ ಏ.ನೀ. ಯೋಜನೆ	40.00	12.00
			6.ಚಿಚಕಂಡಿ ಏ.ನೀ. ಯೋಜನೆ	30.00	9.00
			7.ಮರ್ಜಿ ಏ.ನೀ. ಯೋಜನೆ	30.00	9.00

ವಿಧಾನ ಸಭಾ ಸದಸ್ಯರಾದ ಶ್ರೀ.ಪಾಟೀಲ್.ಎ.ಎಸ್. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 6(ಅ) ಮತ್ತು (ಆ)ಕ್ಕೆ ಅನುಬಂಧ

ಸುಧಾರಣೆ/ಇನ್ನಿತರ ಕಾಮಗಾರಿಗಳು (ರೂಪಾಯಿಗಳಲ್ಲಿ)

ಕ್ರ ಸ ಂ	ಜಿಲ್ಲೆ	ಮತಕ್ಷೇತ್ರ	ಕಾಮಗಾರಿಯ ಹೆಸರು	ಅಂದಾಜು ಮೊತ್ತ	ಅನುದಾನ
1	2	3	4	5	6

1	ವಿಜಾಪೂರ	ವಿಜಾಪೂರ	1.ಬೇಗಂ ತಲಾಬ ಕೆರೆ ಸುಧಾರಣೆ	330.00	99.00
		ನಾಗಠಾಣ	2.ಜಿಗಜೇವಣಗಿ ಕೆರೆ ಸುಧಾರಣೆ	5.00	1.50
			3.ನಂದರಗಿ ಕೆರೆ ಸುಧಾರಣೆ	5.00	1.50
			4.ಗೋಡಿಹಾಳ ಕೆರೆ ಸುಧಾರಣೆ	5.00	1.50
			5. ಚಡಚಣ ಕೆರೆ ಸುಧಾರಣೆ	5.00	1.50
		ಬಬಲೇಶ್ವರ	6.ತಿಕೋಟಾ ಹಳೇ ಕೆರೆ ಸುಧಾರಣೆ	50.00	15.00
			7.ಕಾರಜೋಳ ಹಳೆ ಕೆರೆ ಸುಧಾರಣೆ	35.00	10.50
			8.ಹಂಚಿನಾಳ ಕೆರೆ ಸುಧಾರಣೆ	25.00	7.50
			9.ಯಕುಂಡಿ ಕೆರೆ ಸ ುಧಾರಣೆ	5.00	1.50
			10.ಮಮದಾಪೂರ ಕೆರೆ ಸುಧಾರಣೆ	95.00	28.50
		ಸಿಂದಗಿ	11.ಯಂಕಂಚಿ ಕೆರೆ ಸುಧಾರಣೆ	5.00	1.50
			12.ತಾಂಬಾ ಬ್ಯಾರೇಜ್ ಸುಧಾರಣೆ	5.00	1.50
		ಇಂಡಿ	13.ಭುಯ್ಯಾರ ಬ್ಯಾರೆಜ ಸುಧಾರಣೆ	8.00	2.40
			14.ರಾಜನಾಳ ಕೆರೆ ಸುಧಾರಣೆ	5.00	1.50
			15.ಕೊಳ್ಳುರಗಿ ಕೆರೆ ಸುಧಾರಣೆ	15.00	4.50
		ದೇವರಹಿಪ್ಪರಗಿ	16.ಕುದರಗೊಂಡ ಕೆರೆ ಸುಧಾರಣೆ	5.00	1.50
			17.ಹೂವಿನಹಿಪ್ಪರಗಿ ಕೆರೆ ಸುಧಾರಣೆ	5.00	1.50
		ಮುದ್ದೇಬಿಹಾಳ	18.ಅರಸನಾಳ ಕೆರೆ ಸುಧಾರಣೆ	5.00	1.50
			19.ಬಸರಕೋಡ ಕೆರೆ ಸುಧಾರಣೆ	50.00	15.00
			20.ಮಡಿಕೆಶಿರೂರ ಕೆರೆ ಸುಧಾರಣೆ	50.00	15.00
			21.ಜಂಬಲದಿನ್ನಿ ಕೆರೆ ಸುಧಾರಣೆ	49.00	14.70
2	ಬಾಗಲಕೋಟೆ	ಬಾಗಲಕೋಟ	1.ಕಮತಗಿ ಬ್ಯಾರೇಜ್ ಸುಧಾರಣೆ	5.00	1.50
		ಬದಾಮಿ	2.ಬಾಚನಗುಡ್ಡ ಬ್ಯಾರೇಜ್ ಸುಧಾರಣೆ	35.00	10.50

			3.ಮಂಗಳೂರ ಕೆರೆ ಸುಧಾರಣೆ	50.00	15.00
			4.ರಂಗಸಮುದ್ರ ಕೆರೆ ಸುಧಾರಣೆ	50.00	15.00
			5.ಆಸಂಗಿ ಬ್ಯಾರೇಜ್ ಸುಧಾರಣೆ	5.00	1.50
			6.ಆಸಂಗಿ ಬ್ಯಾರೇಜ್ ಸುಧಾರಣೆ	10.00	3.00
			7.ಚಿಕ್ಕನಸಬಿ ಏ.ನೀ.ಯೋ.ಸುಧಾರಣೆ	50.00	15.00
		ಮುಧೋಳ	8.ಕಟಗೇರಿ ಕೇರೆ ಸುಧಾರಣೆ	5.00	1.50
			9.ಚೆಚಖಂಡಿ ಕೆರೆ ಸುಧಾರಣೆ	30.00	9.00
			10.ಉತ್ತೂರ–ಜಾಳಬೇರ ಬ್ಯಾರೇಜ್ ಸುಧಾರಣೆ	5.00	1.50
			11.ಇಂಗಳಗಿ ಬ್ಯಾರೆಜ್ ಸುಧಾರಣೆ	5.00	1.50
			12.ತಿಮ್ಮಾಪೂರ ಬ್ಯಾರೇಜ್ ಸುಧಾರಣೆ	5.00	1.50
		ಹುನಗುಂದ	13.ಹಲಗಲಿ ಕೆರೆ ಸುಧಾರಣೆ	50.00	15.00
			14.ರಂಗಸಮುದ್ರ ಕಾಲುವೆ ಸುಧಾರಣೆ 0–6	5.00	1.50
			15.ರಂಗಸಮುದ್ರ ಕಾಲುವೆ ಸುಧಾರಣೆ 6–12	5.00	1.50
			16.ನಂದವಾಡಗಿ ಕೆರೆ ಸುಧಾರಣೆ	5.00	1.50
			17. ಹಿರೇಸಿಂಗನಗುತ್ತಿ ಕೆರೆಯ ಹಿನ್ನೀರಿನಿಂದ ಬಾದಿತಗೊಂಡ ವಜ್ಜಲ ಗ್ರಾಮದ ಪುನರ್ವಸತಿ ಸೌಲಭ್ಯ ಕಲ್ಪಿಸುವ ಕುರಿತು.	625.00	187.50
		ಜಮಖಂಡಿ	18.ಸಿದ್ದಾಪುರ ಕೆರೆ ಸುಧಾರಣೆ	20.00	6.00
			19.ಹುಲ್ಯಾಳ ಕೆರೆ ಸುಧಾರಣೆ	15.00	4.50
			20.ಲಿಂಗನೂರ ಕೆರೆ ಸುಧಾರಣೆ	15.00	4.50
			21.ಹಳಂಗಳಿ ಕೆರೆ ಸುಧಾರಣೆ	20.00	6.00
			22.ತುಂಗಳ ಕೆರೆ ಸುಧಾರಣೆ	25.00	7.50
		ತೇರದಾಳ	23.ಬನಹಟ್ಟಿ ಕೆರೆ ಹೂಳೆತ್ತುವದು	20.00	6.00
			24.ತೇರದಾಳ–ಜೀರಗೇರಿ ಕೆರೆ ಸುಧಾರಣೆ	25.00	7.50
			25.ಹನಗಂಡಿ ಸೈ–2 ಸುಧಾರಣೆ	10.00	3.00

			26.ಚಿಮ್ಮಡ ಕೆರೆ ಸುಧಾರಣೆ	10.00	3.50
			27.ಗುಂಡದಬಾವಿ ಕೆರೆ ಸುಧಾರಣೆ	10.00	3.00
		ಬೀಳಗಿ	28.ಲಿಂಗಾಪೂರ ಏ.ನೀ.ಯೋ.ಸುಧಾರಣೆ	20.00	6.00
			29.ಹವಳಖೇಡ ಕೆರೆ ಸುಧಾರಣೆ	5.00	1.50
			30.ಕಲಾದಗಿ ಬ್ಯಾರೇಜ್ ಪ್ರವಾಹ ರಕ್ಷಣಾ ಕಾಮಗಾರಿ	42.50	12.75

ಶ್ರೀ ಎ.ಎಸ್.ಪಾಟೀಲ್ (ನಡಹಳ್ಳಿ):ಸನ್ಮಾನ್ಯ ಸಭಾಧ್ಯಕ್ಷರೇ, ಸನ್ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಕೊನೆಯದಾಗಿ ನನ್ನ ದೇವರ ಹಿಪ್ಪರಗಿ ಮತಕ್ಷೇತ್ರಕ್ಕೆ ಕಡಿಮೆ ಅನುದಾನವನ್ನು ಬಿಡುಗಡೆ ಮಾಡಿದ್ದೀರಿ, ಇದಕ್ಕೆ ಕಾರಣವನ್ನು ಹೇಳಬೇಕು ಮತ್ತು ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂಬುವ ಪ್ರಶ್ನೆಯನ್ನು ಸನ್ಮಾನ್ಯ ಸಚಿವರಲ್ಲಿ ನಾನು ಕೇಳಬಯಸುತ್ತೇನೆ. ಆದರೆ ಸನ್ಮಾನ್ಯ ಸಚಿವರು ಉತ್ತರವನ್ನು ಕೊಡುತ್ತಾ ತಾಂತ್ರಿಕ ಶಕ್ಯತೆ ಅನುದಾನದ ಲಭ್ಯತೆಯನ್ನು ಆಧರಿಸಿ ಹಣವನ್ನು ಬಿಡುಗಡೆ ಮಾಡುತ್ತೇವೆಂಬ ಮಾತನ್ನು ಹೇಳಿದ್ದಾರೆ. ಸನ್ಮಾನ್ಯ ಸಭಾಧ್ಯಕ್ಷರೇ ನಾನು ತಮ್ಮ ಮೂಲಕ ಈ ಸರ್ಕಾರದ ತಾರತಮ್ಯ ನೀತಿಯನ್ನು ಸಚಿವರು ಯಾವ ರೀತಿಯಾಗಿ ವಿರೋಧ ಪಕ್ಷದ ಶಾಸಕರ, ವಿಶೇಷವಾಗಿ ನನ್ನ ಮತ ಕ್ಷೇತ್ರಕ್ಕೆ ಯಾವ ರೀತಿಯಾಗಿ ತಾರತಮ್ಯವನ್ನು ಮಾಡುತ್ತಿದ್ದಾರೆ ಆದರೆ ಇವರು ಉತ್ತರವನ್ನುಸಹ ಬಹಳ ಜಾಣ್ಮೆಯಿಂದ ಕೊಡುತ್ತಿದ್ದಾರೆ. ಸನ್ಮಾನ್ಯ ಸಚಿವರಿಗೆ ಕಳೆದ ವರ್ಷ ಸುಮಾರು ಆರು ಕೋಟಿ ರೂ.ಗಳ ಅನುದಾನದ ಬೇಡಿಕೆಗಳನ್ನು ಇಟ್ಟಿದ್ದೇನು, ಈ ವರ್ಷವೂ ಕೂಡ ಸುಮಾರು ಅದೇ ಮೊತ್ತದ ಬೇಡಿಕೆಯನ್ನು ಇಟ್ಟಿದ್ದೇನೆ, ತಾಂತ್ರಿಕ ಅವಶ್ಯಕತೆಗೆ ಅಪ್ರೂವಲ್ ಮಾಡುವವರು ಯಾರು? ತಮ್ಮ ಇಲಾಖೆಯ ಅಧಿಕಾರಿಗಳಲ್ಲವೇ? ಹಾಗಾದರೆ ವಿರೋಧ ಪಕ್ಷದ ಶಾಸಕರು ಇರುವಂಥ ಕ್ಷೇತ್ರಗಳಲ್ಲಿ ತಾಂತ್ರಿಕ ಅವಶ್ಯಕತೆಗೆ ಅಪ್ರೂವಲ್ ಪಡೆದುಕೊಳ್ಳಲು ಸಾಧ್ಯವಿಲ್ಲವೆ ಎಂಬುದಕ್ಕೆ ಉತ್ತರ ಕೊಡಬೇಕು, ಎರಡನೆಯದು ಅನುದಾನದ ಲಭ್ಯತೆಯ ಮೇಲೆ ನಾವು ಅನುದಾನವನ್ನು ಬಿಡುಗಡೆ ಮಾಡುತ್ತೇವೆಂಬ ಮಾತನ್ನು ಹೇಳಿದ್ದಾರೆ, ಬಹಳ ಸಂತೋಷ, ಏಕೆಂದರೆ ತಮ್ಮ ಮತಕ್ಷೇತ್ರಗಳಿಗೆ ಸುಮಾರು 18-20 ಕೋಟಿ ರೂ.ಗಳ ಕೆಲಸಗಳಿಗೆ ತಾಂತ್ರಿಕವಾಗಿ ಬೇಕಾಗುವಂಥ ಅಪ್ರೂವಲ್ ಪಡೆದುಕೊಳ್ಳುತ್ತೀರಿ ಆದರೆ ನಮ್ಮ ಕ್ಷೇತ್ರಗಳ ಪ್ರಶ್ನೆ ಬಂದಾಗ ತಮಗೆ ತಾಂತ್ರಿಕ ಅವಶ್ಯಕತೆ ಆಗುತ್ತದೆಂದು ತಾವು ಉತ್ತರದಲ್ಲಿ ತಿಳಿಸಿದ್ದೀರಿ, ಏಕೆಂದರೆ ದೇವರ ಹಿಪ್ಪರಗಿ ಮತಕ್ಷೇತ್ರದ ಪ್ರತಿಯೊಂದು ಹಳ್ಳಿಗಳಲ್ಲಿ ಕುಡಿಯುವ ನೀರಿಗೆ ಕೇವಲ ಕೆರೆಗಳ ಆಧಾರದ ಮೇಲೆ ನೀರು ಒದಗಿಸಬೇಕಾಗುತ್ತದೆ. ಎಲ್ಲಿ surface water ಅನುಕೂಲತೆ ಇಲ್ಲವೆಂಬುದು ತಮಗೆ

ಗೊತ್ತಿದೆ. ತಾವು ಕೂಡ ಬಿಜಾಪುರ ಜಿಲ್ಲೆಯ ಉಸ್ತುವಾರಿ ಸಚಿವರಾಗಿದ್ದೀರಿ, ಕೇವಲ ನನ್ನ ಮತಕ್ಷೇತ್ರಕ್ಕಷ್ಟೇ ಅಲ್ಲ, ಒಟ್ಟಾರೆಯಾಗಿ ಬಿಜಾಪುರ ಜಿಲ್ಲೆಗೆ ಇವತ್ತು ತಮ್ಮ ಇಲಾಖೆಯಿಂದ ತಾರತಮ್ಯವಾಗಿದೆ, ಅದಕ್ಕೆ ದಯಮಾಡಿ ಸಚಿವರು ನನ್ನ ಮತಕ್ಷೇತ್ರದ ಎಲ್ಲಾ ಗ್ರಾಮಗಳಲ್ಲಿಯೂ ಕೆರೆಗಳಿವೆ, ಅವೆಲ್ಲಾ ಕೆರೆಗಳ ಹೂಳು ಎತ್ತಲಿಕ್ಕೆ ಒಂದೊಂದು ಕೆರೆಗೆ ಕನಿಷ್ಠ 10–20 ಲಕ್ಷ ರೂ.ಗಳು ಅನುದಾನ ಬಿಡುಗಡೆ ಮಾಡಬೇಕೆಂದು ಒಂದು ವರ್ಷದಿಂದ ಮನವಿ ಮಾಡುತ್ತಿದ್ದೇನೆ.

ಅಧ್ಯಕ್ಷರು: ಪಾಟೀಲರೇ, ಸಚಿವರು ಉತ್ತರ ಕೊಡಲಿ, ಅನುದಾನದ ಬಿಡುಗಡೆಯಲ್ಲಿ ಏನು difference ಆಗಿದೆ, ಏನು ತಾರತಮ್ಯ ಆಗಿದೆ ಎಂಬ ಬಗ್ಗೆ ಸಚಿವರು ಉತ್ತರ ಕೊಡಲಿ ಬಿಡಿ.

ಶ್ರೀ ಎ.ಎಸ್. ಪಾಟೀಲ್: ನಾವು ಈ ರೀತಿಯಾಗಿ ಎಷ್ಟೇ ಸಾರಿ ಮನವಿ ಮಾಡಿದ್ದರೂ ಕೂಡ ಪ್ರತಿಯೊಂದು ಹಂತದಲ್ಲಿಯೂ ಕೂಡ ಈ ಸರ್ಕಾರ ಈ ರೀತಿಯಾಗಿ ಒಂದು ಕಡೆಗೆ ಕರ್ನಾಟಕ ರಾಜ್ಯದ ಸಮಗ್ರ ಅಭಿವೃದ್ಧಿ ಮಾಡುತ್ತೇವೆಂದು ಸಂಕಲ್ಪ ಯಾತ್ರೆಯನ್ನು ಮಾಡುತ್ತೀರಿ, ಇನ್ನೊಂದು ಕಡೆ ಈ ರೀತಿಯಾಗಿ ಅನ್ಯಾಯ ನಡೆಯುತ್ತಿದೆ. ಅದಕ್ಕೆ ದಯಮಾಡಿ ಇದಕ್ಕೆ ಮಾನ್ಯ ಸಚಿವರು ಉತ್ತರ ಕೊಡಬೇಕಾಗಿ ವಿನಂತಿಸುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ (ಮಾನ್ಯ ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು): ಸನ್ಮಾನ್ಯ ಸಭಾಧ್ಯಕ್ಷರೇ, ಅನುದಾನ ಕೊಡುವುದರಲ್ಲಿ ತಾರತಮ್ಯ ಪ್ರಶ್ನೆ ಬರುವುದಿಲ್ಲ. ಕೆರೆ ಕಟ್ಟೆಗಳನ್ನು ಕಟ್ಟಬೇಕಾದರೆ ಅಲ್ಲಿ ನೀರಿನ ಲಭ್ಯತೆ ಮುಖ್ಯಾಂಶವಾಗಿರುತ್ತದೆ ಮತ್ತು ಅಲ್ಲಿ ಕ್ಯಾಚ್‌ಮೆಂಟ್ ಏರಿಯಾ ಎಷ್ಟು ಪ್ರಮಾಣದಲ್ಲಿ ನೀರನ್ನು ಹಿಡಿದಿಡಲಿಕ್ಕೆ ಸಾಧ್ಯವಾಗುತ್ತದೆ, ಆ ಆಧಾರದ ಮೇಲೆ ಮಾಡುತ್ತಿರುತ್ತೇವೆ. ಇವತ್ತು ಮಾನ್ಯ ಶಾಸಕರು ಅವರ ಕ್ಷೇತ್ರಕ್ಕೆ, ವಿರೋಧ ಪಕ್ಷದ ಶಾಸಕರ ಕ್ಷೇತ್ರಕ್ಕೆ ತಾರತಮ್ಯ ಮಾಡಿದ್ದೇವೇಂದು ಹೇಳುತ್ತಿದ್ದಾರೆ ಅದು ಸರಿಯಾದ ವಿಚಾರ ಅಲ್ಲ.

ಈಗ ರಸ್ತೆಗಳು ಆಗಿರಬಹುದು ಅಥವಾ ಮತ್ತೊಂದು ಆಗಿರಬಹುದು, ಅದನ್ನು ತಾರತಮ್ಯ ಮಾಡಿದ್ದೀರಿ ಎಂದರೆ ಒಪ್ಪಬಹುದು. ಆದರೆ, ಕೆರೆಕಟ್ಟೆಗಳನ್ನು ಕಟ್ಟುವಾಗ ಸ್ಥಳ ಪರಶೀಲನೆ ಮಾಡಿ, ತನಿಖೆ ಮಾಡಿಸಿ, ಸ್ಥಳ ಯೋಗ್ಯವಾಗಿ ಇದ್ದರೆ ಕೆರೆಕಟ್ಟೆಗಳನ್ನು ಕಟ್ಟುತ್ತೇವೆ. ಈ ವರ್ಷ ಆರು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇನೆ ಎಂದು ಹೇಳಿದ್ದಾರೆ. ಈ ವರ್ಷ ನಾವು 397 ಲಕ್ಷ ರೂಪಾಯಿಗಳದ್ದು ಪ್ರಸ್ತಾವನೆಯನ್ನು ಅವರಿಗೆ ಕೊಡುವ ಸಲುವಾಗಿ ಇಟ್ಟುಕೊಂಡಿದ್ದೇವೆ. ಆರು ಕೋಟಿ ಕೊಟ್ಟರೆ ಆರು ಕೋಟಿಗಳನ್ನು ಕೊಡಬೇಕೆಂದು ಏನೂ ಇಲ್ಲ ಹಾಗೂ ಹಣ ಕಾಸಿನ ವ್ಯವಸ್ಥೆಯನ್ನು ಕೂಡ ನಾವು ನೋಡಬೇಕಾಗುತ್ತದೆ.Minor irrigation ಗೆ ಬಹುಶಃ ಹಿಂದಿನ ದಿನಮಾನಗಳಲ್ಲಿ, ಬೇಕಾದರೆ ತಾವು ಕಡತಗಳನ್ನು ತರಿಸಿ ನೋಡಬಹುದು ಮತ್ತು ಪ್ರತಿ ವರ್ಷ ಎಷ್ಟು ಅನುದಾನವನ್ನು ಕೊಟ್ಟಿದ್ದಾರೆ ಎನ್ನುವುದನ್ನು ಕೊಟ್ಟಿದ್ದಾರೆ ಎನ್ನುವುದನ್ನು ಬಜೆಟ್ ಅನ್ನು ತರಿಸಿ ನೊಡಬಹುದು. ಸನ್ಮಾನ್ಯ

0-1055-10

ಯಡಿಯೂರಪ್ಪನವರು ಹಾಗೂ ನಾವು ಸಣ್ಣ ನೀರಾವರಿ ಇಲಾಖೆ ವಹಿಸಿಕೊಂಡ ಮೇಲೆ ಮತ್ತು ಹಣಕಾಸು ಇಲಾಖೆಯನ್ನು ವಹಿಸಿಕೊಂಡು ಮೇಲೆ ಈ ಇಲಾಖೆಗೆ ಜೀವದಾನ ಬಂದಿದೆ. ಹೆಚ್ಚಿನ ಅನುದಾನವನ್ನು ಕೊಟ್ಟಿದ್ದಾರೆ. ಅದಕ್ಕೆ ಮಾನ್ಯ ಶಾಸಕರು ಏನು ಹೇಳುತ್ತಾರೆ ಎಂದರೆ ತಾರತಮ್ಯ ನೀತಿ ಎಂದು ಹೇಳುತ್ತಾರೆ. ಖಂಡಿತವಾಗಿ ಸರ್ಕಾರ ತಾರತಮ್ಯ ನೀತಿ ಮಾಡುವುದಿಲ್ಲ ಮತ್ತು ತಾಂತ್ರಿಕ ಒಪ್ಪಿಗೆ ಎನ್ನುವ ಶಬ್ಧವನ್ನು ಅವರು ಬಳಸಿದರು. ತಾಂತ್ರಿಕ ಒಪ್ಪಿಗೆ ಎಂದರೆ ಸ್ಥಳ investigation ಮಾಡಿ ಎಲ್ಲಿ ಕೆರೆಕಟ್ಟೆಗಳನ್ನು ಕಟ್ಟಬಹುದು ಎನ್ನುವುದರ ಬಗ್ಗೆ ಪರಿಶೀಲನೆ ಮಾಡಿ ಕೊಡುತ್ತಾರೆ. ಅವರು ಇನ್ನೊಂದು ಹೇಳಿದರು, ನಿಮ್ಮ ಕ್ಷೇತ್ರಕ್ಕೆ ಹೆಚ್ಚು ಅನುದಾನ ತೆಗೆದುಕೊಂಡಿದ್ದೀರಿ ಎಂದು ಹೇಳದರು. ನನ್ನ ಕ್ಷೇತ್ರ, ಮಾನ್ಯ ಶ್ರೀ ಮುರುಗೇಶ್ ನಿರಾಣಿಯವರ ಕ್ಷೇತ್ರ ಮತ್ತು ಮಾನ್ಯ ಚರಂತಿಮಠರವರ ಕ್ಷೇತ್ರಗಳಲ್ಲಿ ನದಿ ಇರುವುದರಿಂದ ನದಿಗೆ ನಾವು ಬ್ಯಾರೇಜುಗಳನ್ನು ಕಟ್ಟುವಾಗ ಹೆಚ್ಚಿನ ಅನುದಾನ ಬೇಕಾಗುತ್ತದೆ ಮತ್ತು ನದಿಯಲ್ಲಿ ಬ್ಯಾರೇಜುಗಳನ್ನು ಕಟ್ಟಿದರೆ ಅದು ಸದುಪಯೋಗವಾಗುತ್ತದೆ. ನದಿಯಲ್ಲಿ ಯಾವಾಗಲೂ ನೀರು ಸಿಗುತ್ತದೆ. ರೈತರಿಗೆ ಅನುಕೂಲವಾಗುತ್ತದೆ. ಕುಡಿಯುವ ನೀರಿನ ವ್ಯವಸ್ಥೆಗೆ ಅನುಕೂಲವಾಗುತ್ತದೆ. ನದಿಯಲ್ಲಿ ಯಾವಾಗಲೂ ನೀರು ಸಿಗುತ್ತದೆ. ಬ್ಯಾರೆಜುಗಳನ್ನು ಕಟ್ಟಿದರೆ ಅದು ಸದುಪಯೋಗವಾಗುತ್ತದೆ. ನದಿಯಲ್ಲಿ ಯಾವಾಗಲೂ ನೀರು ಸಿಗುತ್ತದೆ. ರೈತರಿಗೆ ಅನುಕೂಲವಾಗುತ್ತದೆ. ಕುಡಿಯುವ ನೀರಿನ ವ್ಯವಸ್ಥೆಗೆ ಅನುಕೂಲವಾಗುತ್ತದೆ. ಇದಕ್ಕೆ ಮಾನ್ಯ ಶಾಸಕರನ್ನು ನಾನು ಕಳಕಳಿಯಿಂದ ವಿನಂತಿ ಮಾಡುವುದು ಇಷ್ಟೆ, ಅವರ ಕ್ಷೇತ್ರಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯಿದೆ. ನಾನು ಜೆಲ್ಲಾ ಉಸ್ತುವಾರಿ ಮಂತ್ರಿ ಅಲ್ಲ. ನಾನು ಬಿಜಾಪುರ ಜಿಲ್ಲೆಯಲ್ಲಿ ಹುಟ್ಟಿದವನು. ಪ್ರತಿಯೊಂದು ಹಳ್ಳಿಯೂ ನನಗೆ ಗೊತ್ತಿದೆ. ನನ್ನ suggestion ಏನೆಂದರೆ, ತಮ್ಮಲ್ಲಿ ಏನಾದರೂ ಸ್ಥಳಗಳು ಆಗುವಂತಹವು ಇದ್ದರೆ ಆ ಪಟ್ಟಿಯನ್ನು ಕಳುಹಿಸಿಕೊಡಿ. ನಮ್ಮ ಇಲಾಖಾ ಅಧಿಕಾರಿಯನ್ನು ಕಳುಹಿಸಿ ಸ್ಥಳ ತನಿಕೆ ಮಾಡಿಸುತ್ತೇನೆ. ಯೋಗ್ಯವಾಗಿದ್ದರೆ. ಅನುದಾನ ಲಭ್ಯತೆ ಆಧಾರದ ಮೇಲೆ ಪ್ರತಿ ವರ್ಷ ಹಂತ ಹಂತವಾಗಿ ತೆಗದುಕೊಳ್ಳುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

(ಗೊಂದಲ)

ಅಧ್ಯಕ್ಷರು: ಮಾನ್ಯ ಪಾಟೀಲರವರೇ ಕುಳಿತುಕೊಳ್ಳಿ, ಮಾನ್ಯ ಜಯಚಂದ್ರರವರು ಮಾತನಾಡುತ್ತಾರೆ.

ಶ್ರೀ ಟಿ.ಬಿ.ಜಯಚಂದ್ರ (ತಿರಾ): ಮಾನ್ಯ ಮಂತ್ರಿಗಳು ಉತ್ತರ ಕೊಡುವಂಥ ಸಂದರ್ಭದಲ್ಲಿ ರಸ್ತೆಗಳನ್ನು ಕೊಡುವ ಸಂದರ್ಭದಲ್ಲಿ ಹಣಕಾಸನ್ನು ಹಂಚಿಕೆ ಮಾಡಬೇಕಾದರೆ ತಾರತಮ್ಯ ಆಗುತ್ತದೆ ಎಂದು ಹೇಳಿದರು.

ಶ್ರೀ ಗೋವಿಂದ ಎಂ.ಕಾರಜೋಳ: ಆಗಿದೆ ಎಂದರೆ ಒಪ್ಪಬಹುದು ಎಂದು ನಾನು ಹೇಳದ್ದೇನೆ. ಕಡತ ತೆಗೆದು ನೋಡಿ.

(ಗೊಂದಲ)

ಶ್ರೀ ಟಿ.ಬಿ ಜಯಚಂದ್ರ (ಶಿರಾ): ಚೇರ್‌ಅನ್ನು change ಮಾಡಿದರೆ ಬದಲಾಗಬಹುದು ಎಂದು ಹೇಳುತ್ತೇನೆ. ನಾನು ಆಕ್ಷೇಪ ಮಾಡಿತ್ತಿಲ್ಲ, ನೀವು ಕುಳಿತುಕೊಳ್ಳಿ. ನಾನು ಸಭಾಧ್ಯಕ್ಷರನ್ನು ಕೇಳುತ್ತಿದ್ದೇನೆ. ಅಲ್ಲಿ ಅಕ್ಕಪಕ್ಕದಲ್ಲಿ ಇರುವಂಥ ಗಾಳಿ ಏನಾದರು ಹೆಚ್ಚು ಕಡಿಮೆ ಆಗಿದೆಯೇ ಏನಾದರೂ ಬದಲಾವಣೆ ಮಾಡುವುದಕ್ಕೆ ಆಗುತ್ತದೆಯೇ ಎಂದು ಕೇಳುತ್ತಿದ್ದೇನೆ. ನಾನು ನಿಮ್ಮ ರಕ್ಷಣೆಗೆ ಬರುತ್ತಿದ್ದೇನೆ. ಆ ಕೆಟ್ಟ ಗಾಳಿ ನಿಮಗೆ ಬೀಸಬಾರದು ಎಂದು ಹೇಳುತ್ತಿದ್ದೇನೆ. ತಾವು ಏನು ಹೇಳಿದಿರಿ ಎಂದರೆ, ತಾಂತ್ರಿಕ ಅವಶ್ಯಕತೆ, ಅನುದಾನದ ಲಭ್ಯತೆ ಇದು ಎಲ್ಲಾ ಸರ್ವೆಸಾಮಾನ್ಯವಾದ ಉತ್ತರ. ಅಧಿಕಾರಿಗಳು ಬರೆದುಕೊಡುತ್ತಾರೆ, ನೀವು ಉತ್ತರ ಕೊಡುತ್ತೀರಿ. ದೇವರಹಿಪ್ಪರಗಿ ಕ್ಷೇತ್ರ ಬಹಳ ಬಡತನದಲ್ಲಿರತಕ್ಕಂಥ ಹಾಗೂ ಬರಗಾಲಕ್ಕೆ ತುತ್ತಾಗಿರತಕ್ಕಂಥ ಕ್ಷೇತ್ರದಲ್ಲಿ, ನೀವು ಹೇಳುವುದನ್ನು ನೋಡಿದರೆ ಅಲ್ಲಿ ಕೆರೆಗಳೇ ಇಲ್ಲವೇ? ಅಲ್ಲಿ improvment ಇಲ್ಲವೇ? ಬೇಡ ನೀವು ಹೊಸ ಬಂದರುಗಳನ್ನು ಕಟ್ಟಬೇಡಿ, ಹೊಸ ಕೆರೆಗಳನ್ನು ಕಟ್ಟಬೇಡಿ. ಆದರೆ, ಇರುವ system ಲ್ಲಿ improvement ಗೆ ನೀವು ದುಡ್ಡು ಕೊಡಬಹುದಲ್ಲವೇ? ಈಗ ನೀವು 18 ಕೋಟಿ ಹಾಕಿ ಅವರಿಗೆ 1 ಕೋಟಿ ಕೊಟ್ಟರೆ ತಾರತಮ್ಯ ಆಗುತ್ತದೋ ಇಲ್ಲವೋ ನೀವೇ ಹೇಳಿ. ಉದಾಹರಣೆಗೆ ಮಾನ್ಯ ಚರಂತಿ ಮಠ್‌ರವರನ್ನು ಹಾಗೂ ಮಾನ್ಯ ಮುರುಗೇಶ್ ನಿರಾಣಿಯವರನ್ನು ತೆಗೆದುಕೊಳ್ಳುತ್ತೀರಿ. ಅವರು ನಿಮ್ಮ ಪಕ್ಷದವರು ಎಂಬ ದೃಷ್ಟಿಯೇ? ಅಲ್ಲಿ ನೀರಾವರಿ ಇದೆ, ಇಲ್ಲವೆಂದು ನಾನು ಹೇಳುವುದಿಲ್ಲ. ಆದರೆ, ನೀವು ಅವರನ್ನು ಉದಾಹರಿಸಬೇಕಾದರೆ ಸದನಕ್ಕೆ ಏನು ಭಾವನೆ ಬರುತ್ತದೆ ಎಂದರೆ, ಇವರು ಬಿಜೆಪಿಯವರಿಗೆ ಮಾತ್ರ ಕೊಡುತ್ತಾರೆ ನಮಗೆ ಕೊಡುವುದಿಲ್ಲವೆಂಬ ಭಾವನೆ ಬರುತ್ತದೆ.

(ಗೊಂದಲ)

ಅಧ್ಯಕ್ಷರು: ಮಾನ್ಯ ಸಿದ್ದುಸವದಿಯವರೇ please ಕುಳಿತುಕೊಳ್ಳಿ.

ಶ್ರೀ ಸಿದ್ದುಸವದಿ: ಸಣ್ಣ ನೀರಾವರಿ ಇಲಾಖೆಯಿಂದ ಒಂದು ರೂಪಾಯಿಯನ್ನು ನಮ್ಮ ಕ್ಷೇತ್ರಕ್ಕೆ ಕೊಟ್ಟಿಲ್ಲ. ನಮ್ಮ ಕ್ಷೇತ್ರಗಳಿಗೆ ಕೊಟ್ಟಿಲ್ಲ. ಅವರ ಸರ್ಕಾರ ಅಧಿಕಾರದಲ್ಲಿದ್ದಾಗ ನಮಗೆ ಕೊಟ್ಟಿಲ್ಲ. ನೀವು ಅಂಕಿ-ಸಂಖ್ಯೆಗಳನ್ನು ತೆಗೆದು ತೋರಿಸಿರಿ. ಯಾವಾಗ ದುಡ್ಡು ಕೊಟ್ಟಿದ್ದಾರೆ ಎಂದು ತೋರಿಸಿ.

(ಗೊಂದಲ)

ಅಧ್ಯಕ್ಷರು: ಈಗ question hour ಮುಗಿಯುತ್ತಾ ಬಂದಿದೆ. ಮಾನ್ಯ ಎ.ಎಸ್. ಪಾಟೀಲರೇ ನೀವು ಕೊನೆಯ ಪ್ರಶ್ನೆಯನ್ನು ಕೇಳಿ.

ಶ್ರೀ ಎ.ಎಸ್. ಪಾಟೀಲ್ ನಡಹಳ್ಳಿ: ಸನ್ಮಾನ್ಯ ಸಚಿವರು ಒಂದು ಮಾತು ಹೇಳಿದರು. ಅಲ್ಲಿ ನದಿ ಇದೆ. ಅದಕ್ಕೆ ನಾವು ಅಲ್ಲಿ ಹೆಚ್ಚಿನ ಹಣವನ್ನು ಬಿಡುಗಡೆ

ಮಾಡಬೇಕಾಗುತ್ತದೆ. ಎಂದು ಹೇಳಿದರು. ಆದರೆ ಸಣ್ಣ ನೀರಾವರಿಯಲ್ಲಿ ಕೆರೆಗಳನ್ನು ಕಟ್ಟುವುದಕ್ಕೆ ಅನುದಾನ ಕೊಡತಕ್ಕಂಥಾದ್ದು, ಎಲ್ಲಿ ಬರಗಾಲದ ಪ್ರದೇಶವಿದೆ, ಎಲ್ಲಿ ಅತ್ಯವಶ್ಯಕವಾಗಿ ಕೆರೆಗಳನ್ನು ನಿರ್ಮಾಣ ಮಾಡಬೇಕಾಗಿದೆ ಅಂತಹ ಕಡೆಯಲ್ಲಿ ಹೆಚ್ಚು ಒತ್ತನ್ನು ಕೊಡಬೇಕು ಎನ್ನುವುದು ಒಂದು ಉದ್ದೇಶವಿದೆ. ಆದರೆ, ಇವತ್ತು ನನ್ನ ಮತ ಕ್ಷೇತ್ರದಲ್ಲಿ ಪ್ರತಿಯೊಂದು ಹಳ್ಳಿಗಳಲ್ಲಿಯೂ ಹಿಂದಿನ ಕಾಲದಲ್ಲಿ ಕಟ್ಟಿರತಕ್ಕಂಥ ಕೆರೆಗಳಿಗೆ ಕನಿಷ್ಠ ಪಕ್ಷ ಕೆರೆಗಳ ಸುಧಾರಣೆಗೆ ದುಡ್ಡು ಕೊಟ್ಟರೆ ಸಾಕು, ಪ್ರತಿ ಗ್ರಾಮದಲ್ಲೂ ಕುಡಿಯುವ ನೀರಿನ ಸಮಸ್ಯೆ ಬಗೆಹರಿಯುತ್ತದೆ. ಅದರ ಜೊತೆಯಲ್ಲಿ ಇವತ್ತು ದೇವರ ಹಿಪ್ಪರಗಿಯಿಂದ ತಾಳಿಕೋಟೆಗೆ ಹೋಗುವ ರಸ್ತೆಯಲ್ಲಿ ಸುಮಾರು ದೋಣಿಗೆ ಬರತಕ್ಕಂಥ 19 ನಾಲಾಗಳು ಬರುತ್ತದೆ. ಅದಕ್ಕೆ ಬಂದವರುಗಳನ್ನು ನಿರ್ಮಾಣ ಮಾಡಿದರೆ ಆ ಎಲ್ಲಾ ಭಾಗದಲ್ಲಿ ನೀರಾವರಿ ಮಾಡುವುದಕ್ಕೆ ಆಗುತ್ತದೆ. ಅದರ ಜೊತೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಏನು ಬಹಳ ದೊಟ್ಟದಾಗಿದೆ, ಅದನ್ನು ಬಗೆಹರಿಸುವುದಕ್ಕೆ ಸಾಧ್ಯವಾಗುತ್ತದೆ. ಆದರೆ, ಸನ್ಮಾನ್ಯ ಸಚಿವರು ಕೇವಲ ತಮ್ಮ ಕ್ಷೇತ್ರಗಳಿಗೆ ಅನುದಾನ ಕೊಡುವುದರ ಜೊತೆಗೆ ತಾಂತ್ರಿಕ ಸಮರ್ಥನೆಯನ್ನು ಮಾಡಿಕೊಳ್ಳುತ್ತಿದ್ದಾರಂ. ಆದರೆ, ನಮ್ಮ ಕ್ಷೇತ್ರಗಳ ವಿಷಯ ಬರುವಂಥ ಸಂದರ್ಭದಲ್ಲಿ ಅದರ ಅವಶ್ಯಕತೆ ಇಲ್ಲ ಎನ್ನುವ ಮಾತನ್ನು ಹೇಳುತ್ತಾರೆ. ದಯಮಾಡಿ ತಾರತಮ್ಯ ನೀತಿಯನ್ನು ನಿಲ್ಲಿಸಬೇಕು ಮತ್ತು ಸರ್ಕಾರ ನನ್ನ ಮತ ಕ್ಷೇತ್ರದಲ್ಲಿ ಬರುವ ಕೆರೆಗಳ ಸುಧಾರಣೆಗೆ ಬೇಕಾದಂಥ ಅನುದಾನದ ಬೇಡಿಕೆಯನ್ನು ನಾವು ಏನು ಕೊಟ್ಟಿದ್ದೇವೆ ಅದನ್ನು ಈಡೇರಿಸುತ್ತೇವೆ ಎನ್ನುವ ಮಾತನ್ನು ಸನ್ಮಾನ್ಯ ಸಚಿವರು ಈ ಸದನದಲ್ಲಿ ತಿಳಿಸ ಬೇಕು ಎಂದು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ: ಸನ್ಮಾನ್ಯ ಸಭಾಧ್ಯಕ್ಷರೆ, ಕುಡಿಯುವ ನೀರಿನ ಸಮಸ್ಯೆ ಇರುವುದು ನನ್ನ ಗಮನಕ್ಕೂ ಬಂದಿದೆ. ನಾನು ಜಿಲ್ಲಾ ಉಸ್ತುವಾರಿ ಮಂತ್ರಿಯಾಗಿ ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಂಡು ವಿಶೇಷವಾದ ಪ್ಯಾಕೇಜ್ ಅನ್ನು ಎರಡು ಜಿಲ್ಲೆಗಳಿಗೆ ಕೊಡಿಸಲಾಗಿದೆ. ಚಿತ್ರದುರ್ಗ ಮತ್ತು ಬಿಜಾಪುರ ಈ ಎರಡು ಜಿಲ್ಲೆಗಳಿಗೆ, ರಾಜ್ಯದಲ್ಲಿ ಎರಡು ಜಿಲ್ಲೆಗಳಿಗೆ ವಿಶೇಷವಾದ ಕುಡಿಯುವ ನೀರಿನ ಯೋಜನೆಯನ್ನು ಪ್ರತಿಯೊಂದು ಹಳ್ಳಿಗೆ ನದಿ ನೀರನ್ನು ಕೊಡುವಯೋಜನೆಯನ್ನು ಹಾಕಿಕೊಂಡಿದ್ದಾರೆ. ಈಗಾಗಲೇ, ಸರ್ವೆ ಮಾಡುವುದು ಹಾಗೂ land estimate ಮಾಡುವುದು ನಡೆದಿದೆ. ಬರಗಾಲಪ್ರದೇಶಗಳಲ್ಲಿ ಹಾಗೂ ಬಯಲು ಸೀಮೆ ಪ್ರದೇಶಗಳಲ್ಲಿ ಕೆರೆಕಟ್ಟೆಗಳನ್ನು ಕಟ್ಟಬೇಕು ಎನ್ನುವುದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ. ಆ ಕಾರಣಕ್ಕಾಗಿಯೇ ಹೆಚ್ಚು ಅನುದಾನವನ್ನು ಬಿಡುಗಡೆ ಮಾಡಿ ಇವತ್ತು ನಾವು ಸ್ಥಳ ಪರಿಶೀಲನೆ ಹಾಗೂ ತನಿಖೆ ಮಾಡುವಂಥ ಕಾರ್ಯ ನಡೆದಿದೆ. ನಾನು ಮಾನ್ಯ ಶಾಸಕರಿಗೆ ಹೇಳಿದೆ. ಆದರೆ ಅವರು ಕೇಳಿಸಿಕೊಳ್ಳಲಿಲ್ಲವೆಂದು ಕಾಣುತ್ತದೆ. ಈ ವರ್ಷ 397 ಲಕ್ಷ ರೂಪಾಯಿಗಳ ಪ್ರಸ್ತಾವನೆಯನ್ನು ನಾವು ಇಟ್ಟುಕೊಂಡಿದ್ದೇವೆ. ಅವರು 600 ಲಕ್ಷ ಕೊಟ್ಟಿದ್ದರೆ ನಾವು

300 ಲಕ್ಷ ಅಂದರೆ, ಆರು ಕೋಟಿ ಕೊಟ್ಟಿದ್ದರೆ ನಾಲ್ಕು ಕೋಟಿ ಸಲುವಾಗಿ ಪ್ರಸ್ತಾವನೆಯನ್ನು ನಾವು ಇಟ್ಟುಕೊಂಡಿದ್ದೇವೆ, ಪ್ರಸ್ತಾವನೆ ಅನುಮೋದನೆ ಆಗಬೇಕಾಗಿದೆ. ಆದ ತಕ್ಷಣ ಹೆಚ್ಚಿನ ಆದ್ಯತೆ ಮೇಲೆ ನಾವು ಕೆಲಸಕಾರ್ಯಗಳನ್ನು ಮಾಡುತ್ತೇವೆ.

THE DEVELOPMENT OF TALUK STADIUM BELTHANAGADY

STARRED QUESTION NO	**: 39 (349)**
NAME OF THE MEMBER	**: SHRI VASANTHABANGERA.K (BELTHANAGADY)**
REPLY BY	**: SHRI GULIHATTL D. SHEKAR (HON'BLE MINISTER FOR TEXTILE, YOUTH SERVICE & SPORTS)**

a) What is the quantum of grant sanctioned for the development of Taluk Stadium, Belthangady, so far?

Grants have been sanctioned for the development of taluk Stadium, Belthangady, Dakshina Kannada District, from the following sources, as detailed hereunder.

State Sector	-Rs.3.00 lakhs
Z P Sector	-Rs.22.86 lakhs
12th Finance Commission Grants	-Rs.44.82 lakhs
Total	Rs.70.68 lakhs

B) What is the current status of the construction work?

Construction of pavilion building is at Plinth level and the work is under progress. Ground levelling is done. Laying of 200 M track and construction of courts for other sports disciplines have to be completed.

C) When will the grants required for completion of the remaining